ಅಡ್ಜೆಸ್ಟ್‌ಮೆಂಟ್ ಮಾಡಿದರೆ ಒಳ್ಳೆಯದಾಗುತ್ತದೆ. ನೀವು ಎಲ್ಲಿಂದ ಪೋಸ್ಟ್ ಶಿಫ್ಟ್ ಮಾಡುತ್ತೀರಿ ಮತ್ತೆ ಅದನ್ನು ಮಾಪಸ್ ಕೊಡತಕ್ಕಂಥದ್ದನ್ನು ಏಕೆ ಮಾಡುತ್ತೀರಿ?

ಶ್ರೀ ಬಿ.ಎನ್. ಬಚ್ಚೇಗೌಡ : ಕೆಲವು ಕಡೆ ಮಾನ್ಯ ಖಿರ್ಗೆಯವರು ತಿಳಿಸಿದ ಹಾಗೆ ರಾಜಕೀಯ ಒತ್ತಡಗಳಿಂದ ಇವೆಲ್ಲಾ ನಡೆದಿರತಕ್ಕಂಥದ್ದು ನಿಜ. ನಮ್ಮ ನಾಗೇಗೌಡರವರ ಜಿಲ್ಲೆಗೆ 167 ಪಶುವೈದ್ಯ ಆಸ್ಪತ್ರೆಗಳನ್ನು ತೆಗೆದುಕೊಂಡಿದ್ದಾರೆ. ಇದು ಮಂಡ್ಯಕ್ಕೆ ಜಾಸ್ತಿ ಇರುವಂತಹದ್ದು. ಆದುದರಿಂದ ಮಾನ್ಯ ಖಿರ್ಗೆಯವರು ತಿಳಿಸಿರುವುದನ್ನು ಪರಿಶೀಲಿಸಿ ಮಾಡುತ್ತೇವೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಖಿರ್ಗೆಯವರು ಏನು ಹೇಳಿದ್ದಾರೆ ಅದರ ಆಧಾರದ ಮೇಲೆ ನಾನು ಒಂದು ಸಣ್ಣ ಮಾಹಿತಿಯನ್ನು ಕೊಡುತ್ತೇನೆ. ಐದು ಸಾವಿರ ದನಗಳಿಗೆ ಒಂದು ಪಶುವೈದ್ಯ ಆಸ್ಪತ್ರೆ ಅಥವಾ ಪ್ರೈಮರಿ ಪಶುವೈದ್ಯ ಸಂಸ್ಥೆ ಎಂದು ಏನು ಮಾಡಿದ್ದಾರೆ ಅದರ ಪ್ರಕಾರ ಕರ್ನಾಟಕ ರಾಜ್ಯಕ್ಕೆ ಇನ್ನು ಆರುನೂರು ಆಸ್ಪತ್ರೆಗಳು ಬೇಕು. ನಾನು ಈಗಾಗಲೇ ಮಾನ್ಯ ಬಚ್ಚೇಗೌಡರಿಗೆ ಹೇಳಿದ್ದೇನೆ. ಜಿಲ್ಲಾಪರಿಷತ್ತಿನಲ್ಲಿ ಯಾವ 320 ಪಶುವೈದ್ಯ ಆಸ್ಪತ್ರೆಗಳು ಸ್ಥಾಪನೆಯಾಗಿವೆ ಅವನ್ನು ಕನ್‌ಫರ್ಮ್ ಮಾಡಿಕೊಡಿ ಎಂದು, ಅದು ಬಹಳ ಒಳ್ಳೆಯ ಕೆಲಸ. ಇದರ ಜೊತೆಗೆ 95-96ನೇ ಸಾಲಿಗೆ ಹೊಸದಾಗಿ 200 ಪಶುವೈದ್ಯ ಆಸ್ಪತ್ರೆಗಳನ್ನು ನೀವು ಮಾಡಬೇಕು. 80 ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಬೇಕು. ನಮ್ಮ ಮಂಡ್ಯ ಜಿಲ್ಲೆಗೆ 125 ಕೊಟ್ಟಿರುವುದು ಅಲ್ಲ. ತಾವು ನಮ್ಮ ಉಪಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್. ಪಟೇಲ್‌ರವರ ಜೊತೆ ಮಾತನಾಡಿ, ದಯಮಾಡಿ ಈ ವರ್ಷ ತಾವು ಹೊಸದಾಗಿ 200 ಪಶುವೈದ್ಯ ಆಸ್ಪತ್ರೆಗಳನ್ನು ಮಂಜೂರು ಮಾಡುವ ಕೆಲಸ ಮಾಡಿ.

ಮೂಡಲಗಿಯಲ್ಲಿ ವಿದ್ಯುತ್ ವಿತರಣ ಕೇಂದ್ರ

836 - ಶ್ರೀ ವಿ.ಎನ್. ಕೌಜಲಗಿ (ಅರಭಾವಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋಕಾಕ ತಾಲ್ಲೂಕಿನ ಮೂಡಲಗಿಯಲ್ಲಿ ಮಂಜೂರಾಗಿರುವ 110 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರದ ಕಾಮಗಾರಿಯು ಯಾವ ಹಂತದಲ್ಲಿದೆ?

ಆ) ಆ ಭಾಗದ ಜನರಿಗೆ ಉಪಯುಕ್ತರಾಗಿರುವ ಈ ವಿದ್ಯುತ್ ವಿತರಣಾ ಕೇಂದ್ರದ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರಕ್ಕೆ ಎಷ್ಟು ಕಾಲಾವಕಾಶ ಬೇಕಾಗುವುದು.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಗೋಕಾಕ್ ತಾಲ್ಲೂಕಿನ ಮೂಡಲಗಿಯಲ್ಲಿ ಮಂಜೂರಾಗಿರುವ 110 ಕೆ.ವಿ. ವಿದ್ಯುತ್ ಉಪಕೇಂದ್ರದ ಕಾಮಗಾರಿಯು ಪ್ರಗತಿಯಲ್ಲಿದೆ. ನಿರ್ಮಾಣ ಕಾರ್ಯಕ್ಕೆ ಬೇಕಾಗಿರುವ ಎಲ್ಲಾ ವಿದ್ಯುತ್ ಉಪಕರಣಗಳು ಮತ್ತು ಇತರೇ ಸಾಮಗ್ರಿಗಳನ್ನು ಸರಬರಾಜು ಮಾಡಲಾಗಿದ್ದು, ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಣ ಕಾರ್ಯಕ್ಕೆ ಬೇಕಾಗಿರುವ ಸಾಮಗ್ರಿಗಳನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಆ) ಈ ವಿದ್ಯುತ್ ಉಪಕೇಂದ್ರದ ನಿರ್ಮಾಣ ಕಾರ್ಯವನ್ನು ಮಾರ್ಚ್ 1996ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಿದೆ.

ಶ್ರೀ ವಿ.ಎಸ್. ಕೌಜಲಗಿ : ತಾವು ಉತ್ತರದಲ್ಲಿ ವಿದ್ಯುತ್ ಪ್ರಸರಣಾ ಮಾರ್ಗ ನಿರ್ಮಾಣಕ್ಕೆ ಸಾಮಗ್ರಿಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೆಂದು ಹೇಳಿದ್ದೀರಿ. ಯಾವ ಯಾವ ಸಾಮಗ್ರಿಗಳನ್ನು ಕೊಟ್ಟಿದ್ದೀರಿ ಅಥವಾ ಇನ್ನೂ ಕೂಡ ಬೇಕಾದಂತಹ ಸಾಮಗ್ರಿಗಳಾವುವು?

ಶ್ರೀ ಜೆ.ಹೆಚ್. ಪಟೇಲ್ : ಗೋಕಾಕ್ ತಾಲ್ಲೂಕಿನ ಮೂಡಲಗಿಯಲ್ಲಿ 100 ಕೆ.ವಿ. ವಿದ್ಯುತ್ ವಿತರಣಾ ಉಪಕೇಂದ್ರ ಮಂಜೂರಾಗಿದ್ದು ಅದರ ಕಾಮಗಾರಿಗಳು ಪ್ರಗತಿಯಲ್ಲಿದೆ. ನಿರ್ಮಾಣ ಕಾರ್ಯಕ್ಕೆ ಬೇಕಾಗುವ ಎಲ್ಲಾ ಉಪಕರಣಗಳನ್ನು ಮತ್ತು ಇತರೇ ಸಾಮಗ್ರಿಗಳನ್ನೂ ಸಹ ಸರಬರಾಜು ಮಾಡಲಾಗಿದೆ.

ಶ್ರೀ ವಿ.ಎಸ್. ಕೌಜಲಗಿ : ನೀವು ಯಾವ ಯಾವ ಸಾಮಗ್ರಿಗಳನ್ನು ಒದಗಿಸಿದ್ದೀರಿ, ಇನ್ನು ಒದಗಿಸಬೇಕಾದಂತಹ ಸಾಮಗ್ರಿಗಳು ಏನು?

ಶ್ರೀ ಜೆ.ಹೆಚ್. ಪಟೇಲ್ : ವಿದ್ಯುತ್ ಉಪಕೇಂದ್ರದ ನಿರ್ಮಾಣ ಕಾರ್ಯವನ್ನು ಮಾರ್ಚ್ 96 ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಉಪಕೇಂದ್ರ ನಿರ್ಮಾಣ ಮಾಡುವುದಕ್ಕೆ ಬೇಕಾಗುವ ಕಂಬಗಳು, ವೈಯರ್, ಟ್ರಾನ್ಸ್‌ಫಾರ್ಮರ್ ಇತ್ಯಾದಿ ಸರಬರಾಜು ಮಾಡಿದ್ದೇವೆ.

ಶ್ರೀ ವಿ.ಎಸ್. ಕೌಜಲಗಿ : ನಿರ್ಮಾಣ ಕಾರ್ಯ ಮುಗಿಯುತ್ತಾ ಬಂದಿದೆ. ಅದಕ್ಕೆ ಬೇಕಾಗುವ ಟ್ರಾನ್ಸ್‌ಫಾರ್ಮರ್ ಕೊಟ್ಟಿಲ್ಲ. ಕಳೆದ 6 ತಿಂಗಳಿಂದ ಹಾಗೆಯೇ ಬಿದ್ದಿದೆ. ಇವರು ಮಾರ್ಚ್ 96ರೊಳಗೆ ಮುಗಿಸುತ್ತೇವೆಂದು ಹೇಳುತ್ತಿದ್ದಾರೆ ಅಂದರೆ ಇನ್ನು ಒಂದು ವರ್ಷ ಕಾಯಬೇಕೇ? ವೋಲ್ಟೇಜ್ ಡ್ರಾಪ್‌ನಿಂದಾಗಿ ಎಲ್ಲಾ ಟ್ರಾನ್ಸ್‌ಫಾರ್ಮರ್ ಸುಟ್ಟುಹೋಗುತ್ತಿವೆ. ಆದುದರಿಂದ ತೀವ್ರವಾಗಿ ಇನ್ನು 2-3 ತಿಂಗಳಲ್ಲಿ ಟ್ರಾನ್ಸ್‌ಫಾರ್ಮರ್ ಕಳುಹಿಸಿಕೊಟ್ಟರೆ ಒಳ್ಳೆಯದಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್ : ಟ್ರಾನ್ಸ್‌ಫಾರ್ಮರನ್ನು ಕಳುಹಿಸಿಕೊಡಲಾಗುತ್ತದೆ. ನಾವು ಮಾರ್ಚ್ ಒಳಗೆ ಎಂದರೆ, ಅದಕ್ಕಿಂತ ಮುಂಚೆ ಆಗುವುದಿಲ್ಲವೆಂದರ್ಥವಲ್ಲ. ಮಾರ್ಚ್ 96ರೊಳಗೆ ಮಾಡುತ್ತೇವೆ.

ಬೀರೂರು ಕ್ಷೇತ್ರದಲ್ಲಿ ಕೊಳವೆ ಬಾವಿಗಳ ಸಂಖ್ಯೆ

954 - ಶ್ರೀ ಎನ್.ಆರ್. ಲಕ್ಷ್ಮಯ್ಯ (ಬೀರೂರು ಕ್ಷೇತ್ರ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1986-87, 87-88 ಮತ್ತು 88-89ನೇ ಸಾಲುಗಳಲ್ಲಿ ಕೊರೆಸಿದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

ಆ) ಕಳೆದ ಮೂರು ವರ್ಷಗಳಲ್ಲಿ ಬೀರೂರು ಕ್ಷೇತ್ರದಲ್ಲಿ ಕೊರೆಸಲಾದ ಕೊಳವೆಬಾವಿಗಳ ಸಂಖ್ಯೆ ಎಷ್ಟು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖಾ ಸಚಿವರು) :

ಅ) ರಾಜ್ಯದಲ್ಲಿ 1986-87, 87-88 ಮತ್ತು 88-89ನೇ ಸಾಲುಗಳಲ್ಲಿ ಕೊರೆಸಿದ ಕೊಳವೆ ಬಾವಿಗಳ ಸಂಖ್ಯೆ ಕೆಳಗಿನಂತಿರುತ್ತದೆ.

1986-87	:	8534
1987-88	:	5240
1988-89	:	4375

ಆ) ಬೀರೂರು ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೊರೆಸಿದ ಕೊಳವೆ ಬಾವಿಗಳ ಸಂಖ್ಯೆ ಕೆಳಗಿನಂತಿರುತ್ತದೆ.

1992-93	:	18